ISSN: 2581-8511
Tumbe Group of International Journal
A Peer Reviewed Multidisciplinary Journal
Volume- 4
Issue-3
Sept-December: 2021

# ರಾಯಚೂರು ಜಿಲ್ಲೆಯ ಶಾಸನೋಲ್ಲೇಖ ಎಡೆನಾಮಗಳು

**ಮಂಜುನಾಥ ತಂದೆ ಫಕೀರಪ್ಪ ಉಪ್ಪಾರ**

ಎಂ.ಎ., ಪಿಎಚ್.ಡಿ., ಸಮಾಜಶಾಸ್ತ್ರ (ಸಂ)
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ - 583276.
ಮೊ.ಸಂ: 9481652198
manjuuppar661996@gmail.com
kannadamanju1996@gmail.com

## ಪ್ರವೇಶಿಕೆ

ಕರ್ನಾಟಕ ಚರಿತ್ರೆಯ ಪುಟದಲ್ಲಿ 'ದೋ-ಅಬ್' ಎಂದೇ ಹೆಸರುವಾಸಿಯಾಗಿರುವ ಜಿಲ್ಲೆಯೇ ರಾಯಚೂರು. ಈ ನೆಲ ಅನೇಕ ಆಳುವ ವರ್ಗಕ್ಕೆ (ಮರ್ರಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ದೇವಗಿರಿಯ ಸೇವುಣರು, ವಾರಂಗಲ್ಲಿನ ಕಾಕತೀಯರು, ವಿಜಯನಗರದ ಅರಸರು, ಬಹುಮನಿಯ ಸುಲ್ತಾನರು, ಕದಂಬರು, ಹೈಹಯರು, ಸಿಂಧರು, ದೇವಗಿರಿಯ ಯಾದವರು, ಗುಡಗುಂಟಿ ಸಂಸ್ಥಾನ, ಗುಂತಗೋಳ ಸಂಸ್ಥಾನ, ದೇವದುರ್ಗ ಸಂಸ್ಥಾನ, ಮೊಘಲರು, ಹೈದರಾಬಾದ್ ನಿಜಾಮರು), ಅವರ ಬಾವುಟಾದಿಗಳಿಗೆ, ಜನಮಾನ್ಯರಿಗೆ, ಅಷ್ಟೇ ಅಲ್ಲದೆ ಪ್ರಾಣಿ-ಪಕ್ಷಿ, ಸಸ್ಯ ಸಂಕುಲಕ್ಕೆ ಆಶ್ರಯ ತಾಣವಾಗಿರುವುದು ಕೂಡ ಚರಿತ್ರೆಯ ಕುರುಹುಗಳಿಂದಲೆ ತಿಳಿದುಬರುತ್ತದೆ.

"ಉತ್ತರದಲ್ಲಿ ಕಲಬುರಗಿ, ವಾಯುವ್ಯದಲ್ಲಿ ವಿಜಯಪುರ, ಪಶ್ಚಿಮದಲ್ಲಿ ಬಾಗಲಕೋಟೆ, ಕೊಪ್ಪಳ ಜಿಲ್ಲೆಗಳೂ, ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವ ಮತ್ತು ದಕ್ಷಿಣದಲ್ಲಿ ಆಂಧ್ರಪ್ರದೇಶವೂ ಸುತ್ತುವರೆದಿವೆ. 1997ರ ಆಗಷ್ಟಿನಲ್ಲಿ ರಾಯಚೂರು ಜಿಲ್ಲೆಯನ್ನು ಎರಡು ಭಾಗವಾಗಿ ವಿಂಗಡಿಸಿ ಕೊಪ್ಪಳ ಜಿಲ್ಲೆಯನ್ನು ನಿರ್ಮಿಸಲಾಗಿದೆ. ಈಗಿನ ರಾಯಚೂರು ಜಿಲ್ಲೆಯಲ್ಲಿ ದೇವದುರ್ಗ, ಲಿಂಗಸುಗೂರು, ಮಾನ್ವಿ, ರಾಯಚೂರು, ಸಿಂಧನೂರು – ಈ ಐದು ತಾಲ್ಲೂಕುಗಳಿದ್ದು 37 ಹೋಬಳಿಗಳು ಒಟ್ಟು 878 ಗ್ರಾಮಗಳಿದ್ದು ಅದರಲ್ಲಿ 70 ಬೇಚಿರಾಗ್ ಗ್ರಾಮಗಳಿವೆ. ಈ ಜಿಲ್ಲೆಯ ವಿಸ್ತೀರ್ಣ 5,559 ಚ.ಕಿಮೀ. ಕರ್ನಾಟಕದ ಉತ್ತರದಲ್ಲಿ ಪೂರ್ವಭಾಗಕ್ಕಿರುವ ಈ ಜಿಲ್ಲೆ ಉ.ಅ.150 10" ನಿಂದ 160 50" ವರೆಗೂ ಪೂ.ರೇ. 750 80'' ನಿಂದ 770 50'' ವರೆಗೂ ಹರಡಿದ್ದು ಜಿಲ್ಲೆ ಕಪ್ಪು ಜೇಡಿಮಣ್ಣಿನ ಮೈದಾನ ಪ್ರದೇಶದಿಂದ ಅಲ್ಲಲ್ಲಿ ಹರಡಿದಂತಿರುವ ಗುಡ್ಡಗಳಿಂದ, ಕೆಂಪುಮಣ್ಣಿನ ಭೂಮಿಯಿಂದ ಪೊದೆಯಂಥ ಮರಗಿಡಗಳ ಕಾಡುಗಳಿಂದ ಕೂಡಿದೆ" (ರಾಮಚಂದ್ರೇಗೌಡ ಹಿ ಶಿ(ಪ್ರ ಸಂ):2007:821)ಈ ಹೇಳಿಕೆಯ ಕೆಲವು ಅಂಶಗಳನ್ನು ಈ ಮುಂದಿನ ಬರೆಹವು ಸ್ಪಷ್ಟಪಡಿಸುತ್ತದೆ.

**ಪ್ರಾತಿನಿಧಿಕ ಕೀವಡ್ಸ್‌ಗಳು**: ಎಡೆನಾಮಗಳು, ರಾಯಚೂರು, ಸಮಾಜಶಾಸ್ತ್ರೀಯ ಪರಿದೃಷ್ಟಿ, ಸಮುದಾಯ

ಚರಿತ್ರೆಯ ಚೌಕಟ್ಟಿನಿಂದ ಅಲಕ್ಷಿಸಲ್ಪಟ್ಟ ಹಲವಾರು ಸಾಮಾಜಿಕ-ಸಾಂಸ್ಕೃತಿಕ ಸಂಗತಿಗಳನ್ನು ಅರಿಯಲು ಈ ಎಡೆನಾಮಗಳ ಅಧ್ಯಯನವು ಸಾಥ್ ನೀಡುತ್ತವೆ. ನಿಷ್ಠವಾದ, ಇತರ ಚಾರಿತ್ರಿಕ ಪುರಾವೆಗಳಿಲ್ಲದ ಸಂದರ್ಭದಲ್ಲಿ ಎಡೆನಾಮಗಳು ಅಪೂರ್ವ ಮಾಹಿತಿಯನ್ನು ನೀಡುತ್ತವೆ. ಹೀಗಾಗಲೇ ಈ ಎಡೆಗಳ ಜಾಡು ಹಿಡಿದು ಪೂರ್ವಿಕರ ಪೂರ್ವಚರಿತ್ರೆಯನ್ನು ರಚಿಸಿದವರ ಪಟ್ಟಿಯು ನಮ್ಮ ಮುಂದಿದೆ. ಅದರಲ್ಲಿ ಶಂಕರ ಬಾಳದೀಕ್ಷಿತ ಜೋಷಿಯವರು ಕರ್ನಾಟಕದ ಮಟ್ಟಿಗೆ ಮೊದಲಿಗರೆನ್ನಬಹುದು. ಶಾಸನಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ

ವಿದ್ವಾಂಸರು ಮಾತ್ರ ಸ್ಥಳನಾಮ-ವ್ಯಕ್ತಿನಾಮಗಳ ಚರ್ಚೆಯನ್ನು ಆಗೀಗ ಮಾಡುತ್ತಿದ್ದುದು ಕಂಡುಬರುತ್ತದೆ. ಎಡೆನಾಮಗಳನ್ನು ಮತ್ತು ವ್ಯಕ್ತಿನಾಮಗಳನ್ನು ಅಧ್ಯಯನ ಮಾಡಿದವರಲ್ಲಿ ಜೆ ಎಫ್ ಫ್ಲೀಟ್, ಬಿ ಎಲ್ ರೈಸ್ ಮುಂತಾದ ವಿದೇಶಿಯರ ಜೊತೆಗೆ ಆರ್ ನರಸಿಂಹಾಚಾರ, ನೆಲಮಂಗಲ ಲಕ್ಷ್ಮೀನಾರಾಯಣರಾಯರು, ಪಂಚಮುಖಿಯವರು, ಪಿ ಬಿ ದೇಸಾಯಿಯವರು ಮೊದಲಾದವರು ಎಂದು ಡಾ ಎಂ ಬಿ ನೇಗಿನಹಾಳರವರು 1996ರಲ್ಲಿ 65ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ(ಹಾಸನ)ದಲ್ಲಿ 'ಕರ್ನಾಟಕ ಸ್ಥಳನಾಮ-ವ್ಯಕ್ತಿನಾಮಗಳ ಅಧ್ಯಯನ' ಎಂಬ ಪ್ರಬಂಧದಲ್ಲಿ ಮಂಡಿಸುತ್ತಾರೆ. ಅಂತೆಯೇ ಕನ್ನಡ ವಿಶ್ವವಿದ್ಯಾಲಯದಲ್ಲಿನ ಎಂ ಫಿಲ್ ಮತ್ತು ಪಿಎಚ್ ಡಿ ಪ್ರಬಂಧಗಳ ಪಟ್ಟಿಯನ್ನು ನೋಡಿದಾಗ ಕೇವಲ ಶಾಸನಶಾಸ್ತ್ರ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಹಾಗೂ ಕನ್ನಡ ಭಾಷಾಧ್ಯಯನ ವಿಭಾಗದವರು ಮಾತ್ರ ಸ್ಥಳನಾಮಗಳ ಕುರಿತು ಸಂಶೋಧನೆ ಹಾಗೂ ಬರವಣಿಗೆಯನ್ನು ಮಾಡಿದ್ದಾರೆ. ಕನ್ನಡ ನಾಡಿನ ಎಡೆಗಳು ಸಾಮಾಜಿಕ-ಸಾಂಸ್ಕೃತಿಕ ನಿಧಿಗಳು ಎಂದು ಭಾವಿಸಿದರೆ ಅವುಗಳ ಕುರಿತು ಅಧ್ಯಯನ ಕೈಗೊಳ್ಳುವುದು ಇತರ ಜ್ಞಾನಶಿಸ್ತುಗಳ ಜವಾಬ್ದಾರಿ ಎಂದೇ ಅರ್ಥವಾಗುತ್ತಲ್ಲವೇ? ಅದರಲ್ಲಿಯೂ ಭಾರತೀಯ ಸಮಾಜಗಳ 3 ಆಧಾರ ಸ್ತಂಭಗಳಲ್ಲಿ ಒಂದಾದ ಎಡೆ(ಗ್ರಾಮ)ಗಳ ಅಧ್ಯಯನವು ಸಮಾಜಶಾಸ್ತ್ರದ ವ್ಯಾಪ್ತಿಯಲ್ಲಿ ಬರುವ ಕಾರಣ ಸಮಾಜಶಾಸ್ತ್ರವನ್ನು ಅಭ್ಯಸಿಸುತ್ತಿರುವ ನಾನು ಸಮಾಜಶಾಸ್ತ್ರೀಯ ಪರಿದೃಷ್ಟಿಯಿಂದ ಎಡೆಗಳ ಕುರಿತು ಅಧ್ಯಯನ ಮಾಡಲು ಪ್ರಯತ್ನ ಪಟ್ಟಿರುವೆ.

**ಎಡೆನಾಮಗಳ ಅಧ್ಯಯನಕ್ಕೆ ಶಾಸ್ತ್ರದ ಪಟ್ಟ**

ಸಾಮಾಜಿಕ-ಸಾಂಸ್ಕೃತಿಕ ಚಹರೆಗಳನ್ನು ಬಿಂಬಿಸುವ ಎಡೆನಾಮಗಳು ಒಂದು ವಿಜ್ಞಾನವಾಗಿ ಬೆಳೆದದ್ದು 19ನೇ ಶತಮಾನದ ಉತ್ತರಾರ್ಧದಲ್ಲಿ ಎನ್ನಬಹುದು. ಮೊಟ್ಟ ಮೊದಲಿಗೆ 1768 ರಲ್ಲಿ ಜರ್ಮನಿಯ 'ಗಾಟ್‌ಫ್ರೀಡ್ ವಿಲ್ ಹೆಲ್ಮ್ ಲೀಬ್ನಿಜ್' ಎಂಬುವವರು ಆಂಗ್ಲ ಎಡೆನಾಮಗಳ ಬಗ್ಗೆ ಅಧ್ಯಯನ ಮಾಡಿದರು. ಎಡೆನಾಮಗಳ ರಚನೆ ಮತ್ತು ಸನ್ನಿವೇಶಗಳ ಮಹತ್ವವನ್ನು ಹೇಳುವುದರ ಜೊತೆಗೆ ಇದಕ್ಕೆ ಒಂದು ತತ್ಯಬದ್ಧವಾದಂತಹ ವಿಧಿ ವಿಧಾನಗಳನ್ನು ರೂಪಿಸಿ, ಎಡೆನಾಮಗಳಿಂದ ಒಂದು ಸಂಸ್ಕೃತಿಯ ಅನಾವರಣ ಸಾಧ್ಯವೆಂಬ ಸತ್ಯವನ್ನು ದೃಢೀಕರಿಸಿದರು. ಮುಂದೆ ಇದಕ್ಕೆ ತಾತ್ವಿಕ ಚೌಕಟ್ಟನ್ನು ನೀಡಿ ಅದರದೇ ಆದ ಅಧ್ಯಯನ ವಿಧಾನಗಳು, ವಿಷಯ-ವ್ಯಾಪ್ತಿಗಳನ್ನು ಸೂಚಿಸಿ ಇದನ್ನು ಎಡೆನಾಮ ಶಾಸ್ತ್ರವನ್ನಾಗಿ ಮಾಡಿದವರು ಇಂಗ್ಲೇಡಿನ ಸೀಟ್, ಎ.ಎಚ್.ಸ್ಮಿತ್, ಇಸ್ವಾಲ್, ಗಾರ್ಡಿನರ್, ಅಟ್ಲ, ಸೂಟನ್, ಡೌಜತ್, ಅಡಾಲ್ಪಬ್ಯಾಚ್, ಜರ್ಮನಿಯ ಫಾರ್‌ಸ್ಟೀಮನ್, ಫ್ರಾನ್ಸ್ ಲಾಂಗ್ನನ್, ನಾರ್ವೆಯ ರೈ, ಸ್ವೀಡನ್ನಿನ ನೋರನ್, ಅಮೆರಿಕದ ಸಂಯುಕ್ತ ಸಂಸ್ಥಾನದ ಜಾನ್ ಹೆಕ್ ವೆಲ್ಡರ್, ಹೆನ್ರಿ ಸ್ಕೂಲ್ ಕ್ಯಾಸ್ಟ್, ಇ.ಸಾಲ್ವರ್ತೆ, ವಾರನ್ ಅಪ್‌ಹ್ಯಾಮ್, ಲೂಯಿಸ್ ಪೌಂಡ್, ಲಿಲಿಯನ್ ಲಿಂಡರ್ ಫಿಟ್ ಪ್ಯಾಟ್ರಿಕ್, ಅಯೋವಾ, ಅಲೆನ್‌ವಾಕರ್ ರೀಡ್, ಮಿಸ್ಸೋರಿ, ರಾಬರ್ಟ್ ಎಲಾ ರಾಮಸೇ, ಹ್ಯಾರಿಮೋರ್ಗನ್ ಆಯರ್ಸ್, ಸ್ಟೀವರ್ಟ್, ಎಹ್ವಾನ್ ಸ್ಪೆರ್ಗ, ಜೆ.ಟಿ.ಲಿಂಕ್, ಬರ್ಡ್ ಗ್ರಾಂಗರ್, ಇ.ವಾಲೇಸ್, ಮ್ಯಾಕ್ಸ್ ಮುಲನ್, ಭಾರತದಲ್ಲಿ ಅಪ್ಪಯ್ಯ ದೀಕ್ಷಿತ, ಎಚ್, ಬಾಲಲೋಚನ, ಶಂ.ಬಾ. ಜೋಶಿ, ರಾಮ್ ಕೋಮಲ್ ಸೇನ್, ಗುಂಡರ್ಟ್, ಆರ್.ಪಿ. ಬ್ರಾನ್ಸಿಲ್, ಆರ್.ಎಸ್. ವೈಟೊಯ್ಯ, ಪದ್ಮನಾಭ ಮೆನನ್, ಜೆ.ಎಫ್. ಫ್ಲೀಟ್, ರೆವರೆಂಡ್ ಪೆರಾಡ್ಸ್ವಾಹಾನ್, ಹಯವದನರಾವ್, ಎಸ್.ಕೆ.ಚಟರ್ಜಿ, ಎನ್.ಕೆ. ಬೋಸ್. ಹಿರಲಾಲ್, ಸಿ. ನಾರಾಯಣರಾವ್, ಸೇತುಪಿಳ್ಳೆ, ನಾರಾಯಣರೆಡ್ಡಿ, ತ್ಯಾಗರಾಜು, ಎಸ್.ಡಿ. ಸಂಕಾಲಿಯಾ, ಹಯವದನರಾಯರು, ಮಾಸ್ತಿ, ದೇಜಗೌ, ಆರ್.ಸಿ. ಹಿರೇಮಠ, ಎಂ.ಎಂ. ಕಲ್ಬುರ್ಗಿ, ಎಂ ಚಿದಾನಂದಮೂರ್ತಿ, ಆರ್.ಸಿ.ಹಿರೇಮಠ, ಹಂಪನಾ, ಎಂ.ಬಿ. ನೇಗಿಹಾಳ್, ವಿ. ಗೋಪಾಲಕೃಷ್ಣ, ಕೆಮೂರು ರಘುಪತಿಭಟ್ಟ, ಪಂಜೆ, ಸೇಡಿಯಾಪು ಕೃಷ್ಣಭಟ್ಟ, ಕೆಮ್ಮರು ರಘುಪತಿಭಟ್ಟ, ಮೊದಲಾದವರು.

ಸಾಂಸ್ಥಿಕ ಪ್ರಯತ್ನಗಳು: ಪುರಾತತ್ವ ಶಾಸ್ತ್ರಜ್ಞರು, ಭಾಷಾ ವಿಜ್ಞಾನಿಗಳು, ಇತಿಹಾಸಕಾರರು, ಇನ್ನಿತರ ಮಾನವಿಕ ಹಾಗೂ ಸಮಾಜವಿಜ್ಞಾನಶಾಸ್ತ್ರಜ್ಞರುಗಳಿಂದ ಕೂಡಿದ ಸಂಘ-ಸಂಸ್ಥೆಗಳು ಎಡೆನಾಮಶಾಸ್ತ್ರಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಕೈಗೊಂಡಿವೆ. ಅವುಗಳಲ್ಲಿ ಪ್ರಾತಿನಿಧಿಕವಾಗಿ ಬೆಲ್ಜಿಯೆಂನ ಲೂವೈನಿನಲ್ಲಿ 1921ರಲ್ಲಿ ಸ್ಥಾಪನೆಗೊಂಡ 'ಆಂಗ್ಲ ಸ್ಥಳನಾಮ ಸಂಶೋಧನ ಮಂಡಳಿ' , ಭಾರತದಲ್ಲಿ 'ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಳ ಅಂಡ್ ಬಾಂಬೆ' , 'ಮಿಥಿಕ್ ಸೊಸೈಟಿ ಆಫ್ ಇಂಡಿಯ' , 'ಇಂಡಿಯನ್ ಆಂಟಿಕ್ವಯಿರಿ ಅಂಡ್ ಆನಲ್ಸ್ ಆಫ್ ಒರಿಯಂಟಲ್ ರಿಸರ್ಚ್' ಮೈಸೂರಿನಲ್ಲಿ 1978ರಲ್ಲಿ ಸ್ಥಾಪನೆಗೊಂಡ 'ಪ್ಲೇಸ್ ನೇಮ್ ಸೊಸೈಟಿ ಆಫ್ ಇಂಡಿಯ' ಎಂಬ ಸಂಸ್ಥೆ ಮೊದಲಾದವುಗಳಾಗಿವೆ. ಇವುಗಳು ಎಡೆನಾಮಗಳಿಗೆ ಸಂಬಂಧಿಸಿದ ಅನೇಕ ಸಂಶೋಧನೆಗಳನ್ನು, ನಿಘಂಟುಗಳನ್ನು, ಲೇಖನಗಳನ್ನು ಪ್ರಕಟಿಸಿವೆ.

**ಎಡೆನಾಮಗಳ ವರ್ಗೀಕರಣ**

ಭಾರತೀಯ ವಿದ್ವಾಂಸರುಗಳನ್ನೊಳಗೊಂಡಂತೆ ಪಾಶ್ಚಾತ್ಯ ವಿದ್ವಾಂಸರುಗಳು ಕೂಡ ಎಡೆನಾಮಗಳನ್ನು ಹಲವು ರೀತಿಯಲ್ಲಿ ವರ್ಗೀಕರಣ ಮಾಡಿರುತ್ತಾರೆ. ಅವುಗಳಲ್ಲಿ ಪ್ರಾತಿನಿಧಿಕ ಕನ್ನಡದ ವಿದ್ವಾಂಸರ ವರ್ಗೀಕರಣವನ್ನು ಮಾತ್ರ ಈ ಕೆಳಕಂಡಂತಿವೆ,

- ಶಂ ಬಾ ಜೋಶಿಯವರ ವರ್ಗೀಕರಣ
- ಡಾ ಎಂ ಎಂ ಕಲಬುರ್ಗಿಯವರ ವರ್ಗೀಕರಣ
- ಪ್ರೊ ದೇ ಜವರೇಗೌಡರವರ ವರ್ಗೀಕರಣ

ಸಮಾಜಶಾಸ್ತ್ರದ ಪರಿಕಲ್ಪನೆಗಳಾದ ಬಂಧುತ್ವ, ಕೂಡಾವಳಿ, ವ್ಯಕ್ತಿ ಮತ್ತು ಸಮಾಜ, ಸಮುದಾಯ ಮೊದಲಾದವುಗಳಿಗೆ ಸಂಬಂಧಿಸಿದ ಪದಗಳು ಒಳಗೊಂಡಿರುವ ಎಡೆಗಳನ್ನು ಈ ಮೂವರುಗಳು ವಿದ್ವಾಂಸರುಗಳು ಮಾಡಿರುವ ವರ್ಗೀಕರಣಗಳನ್ನು ಒಳಗೊಂಡಂತೆ ಈ ಮುಂದಿನಂತೆ ಎಡೆನಾಮಗಳ ವರ್ಗೀಕರಣವನ್ನು ನೋಡಬಹುದಾಗಿದೆ,

**ಅಂಕಿ-ಸಂಖ್ಯೆಗೆ ಸಂಬಂಧಿಸಿದವು**

ಅಂಕಿಮಗೆರೆ, ಆತನೂರು, ಅವರೆಗೆನೂರು, ಉಟುಕನೂರು, ಕಡ್ಡರನೂರು, ಕಾಂತನೂರು, ಕಾಸಿಗನೂರು, ಕೊಳನೂರು, ಗುಡಿದೆನೂರು, ತಳಹನೂರು, ಪಂಚವಳ್ಳಿ, ಬಲ್ಲನಮಗನೂರು, ಮಾದನೂರು, ಮುದಗನೂರು, ಮುದ್ದನೂರು, ಸಿಂಧನೂರು.

**ಅರಸೋತ್ಪತ್ತಿಗೆಗೆ ಸಂಬಂಧಿಸಿದವು**

ಅರಸಿಯ ಕೆರೆ, ಎಡದೊರೆ, ಒರೆಯೂಪ್ಪರ್ರ, ಕಪ್ಪಕಲ್ಲ, ಕರಹಡನೆಲೆವೀಡು, ಕಲಿಯಮಗೆರೆ, ಕೊಳ್ಳಿಯತೆರು, ಕೋಟೆಪಳ್ಳಿ, ಚಮಕಾಸಿದುರ್ಗ, ಜಯಂತಿಪುರ, ಜೀಯರಕೆರೆ, ದೇವದುರ್ಗ, ನೀರಕೋಟೆ, ಪನ್ನಾಳೆಯದ ಕೋಟೆ, ಪೈಯಿಠಾಣ, ಭೇರಿಗೆ, ಮಲ್ಲೆದೇವರದುರ್ಗ, ಮಾಗಡೆದುರ್ಗ, ಮಾನ್ವಿಯ ಕೋಟೆ, ಮಾಯನಾಯಕವಾಡಿ, ಮುದಗಲ ಕೋಟೆ, ರಾಚೂರಿ ಪಟ್ಟಣ, ರಾಯದುರ್ಗ, ವರದರಾಜಅಂಮಪುರ, ವಿನಾಯಕನ ನಿಟು, ಸಿಂಧನೂರು, ಸಿಲಾದುರ್ಗ.

**ಕಲ್ಲಿಗಳಿಗೆ ಸಂಬಂಧಿಸಿದವು**

ಕಪ್ಪಕಲ್ಲ, ಕಲ್ಮಲೆ, ಕಲ್ಲಂಗೆರೆ, ಕಲ್ಲೂರು, ಕಾವೆಗಲ್ಲು, ಕೇತವಿಕಲ್ಲ, ಗೊರಕಲ್ಲು, ತೆಗ್ಗಿಯ ಗುತ್ತಿಗಲ್ಲು, ನಿಜಕಲ್ಲು, ನೆರೆಯಂಗಲ್ಲು, ಬಂಮರಕಲ್ಲು, ಬೆಳ್ವೋಣಿಯಕಲ್ಲು, ಮಾದಗಲ್ಲು, ಮುದಗಲ್ಲು, ಲಿಂಗದ ಕಲ್ಲು, ಸಿಲಾದುರ್ಗ, ಸೀಳುಕಲ್ಲು.

**ಕೂಡಿಕೆಗೆ ಸಂಬಂಧಿಸಿದವು**

ಕೂಡಲಿಗೆ, ಕೂಡಲೂರು, ಕೂಡಲೂರ ಸಂಗಮ, ನೆರೆಯಂಗಲ್ಲು.

ಗೃಹಾದಿಗಳಿಗೆ ಸಂಬಂಧಿಸಿದವು

ಚಂದ್ರನಹಳ್ಳಿ.

**ಗಾತ್ರಕ್ಕೆ ಸಂಬಂಧಿಸಿದವು**

ಅಸಿಯಬಟ್ಟೆ, ಕಂಬತಿರದೊಡಿ, ಕಿರಿಯೂರು, ತವಕ್ಕುಲ್ ದಿಡ್ಡಿ, ತುಂಬುಳ, ಬಳ್ಳನಿಟ್ಟೆಗೆ, ಬಿಮಾಳಕುರಿಕೆ, ಪಿರಿಯ ಕೋಲೂರು, ಪಿರಿಯ ಗೊಬ್ಬೂರು, ಪಿರಿಯ ಬೆಳ್ಳಹಾರ, ಪಿರಿಯ ಬ್ರಹ್ಮಪುರಿ, ಪಿರಿಯ ಮೊಸಗೆ, ಪಿರಿಯ ಹೆಸರೂರು, ಹಾಗನಗೆರಿ, ಹಿರಿಯಕೆರೆ, ಹಿರಿಯ ಗೊಬ್ಬೂರು, ಹಿರಿಯ ಬಳಗಾರನೂರ, ಹಿರೇಯಹಳ್ಳ.

**ಗಿಡಗಳಿಗೆ ಸಂಬಂಧಿಸಿದವು**

ಅಂಬಟಿಗುಡ, ಕಂಚಿ, ಕಟ್ಟೆಗೆ, ಕೋಡುಂಗಲ್ಲ, ಗಳಜಿ, ಚಂದನಕೆರೆ, ಜಡೆಹಳ್ಳ, ತಾವರೆಗೆರೆ, ತೆಗ್ಗಿಯ ಗುತ್ತಿಗಲ್ಲು, ಬಂಮರಕಲ್ಲು, ಬನವಾಸೆ, ಬನ್ನಿಗೋಳ, ಬಮ್ಮರಹಾಳ, ಬಸವನ ಕೊತ್ತಳ, ಬಸವನ ದಿಡಿ, ಬಸವನ ನಿಟು, ಬಿಳಿಲವಟ್ಟ, ಬೂದಿವಟ್ಟ, ಬೂದಿವಾಳ, ಬೇರೂರ, ಬೇವಿನಹಳ್ಳಿ, ಬೇವಿನಹಾಳ, ಮಲ್ಲಿಗೆ ಮಡುವು, ಮರಿಚೇಡ, ಮರಿಯಿಟ್ಟೆಗೆ, ಮಹಾನಂದಿ, ಮಹೀಷ್ಮತಿಪುರ, ಮಲ್ಲಿನ್ನೇನಿ, ಸಾಲಗುಂದಿ, ಸೋಮನಹಳ್ಳಿ.

**ದಿಕ್ಕುಗಳಿಗೆ ಸಂಬಂಧಿಸಿದವು**

ಎಡದೊರೆ, ಕಲ್ಲಕೆಳಗೆಯ್ಯೂರು, ಪಡುವಗೇರಿ, ಪಡುವಲೆಡಮೆಟ್ಟೆ, ಮೂಡಣಹಳ್ಳ.

**ದಿನಸುದಳಿಗೆ ಸಂಬಂಧಿಸಿದವು**

ಅವರೆಗೆನೂರು, ಉಪ್ಪಿನ ಕಾವಲಿ, ತಲೆಖಾನ, ತುಪ್ಪದುರು, ನಿಟ್ಟರವೆ, ನೀರಕೋಟೆ, ಬೆಂಡೆಗೆರೆ, ಭತ್ತಗ್ರಾಮ, ಹುಣಸೆಹಟ್ಟಿ.

**ದೇವತಾದಿಗಳಿಗೆ ಮತ್ತು ಪುರಾಣಗಳಿಗೆ ಸಂಬಂಧಿಸಿದವು**

ಅಮರಗುಂಡ, ಅಮರಗೊಂಡ, ಇಭರಾಯಮನಗರ, ಐಯಣಸಿರಿವುಪ, ಕಪದಮಠ, ಕಲಿಯಮಗೆರೆ, ಕಲೂರಮಠ, ಕಾಲಹಸ್ತಿ, ಕುರುಗೋಡು, ಕುರುವಡ, ಕುರುವಡ ಬಾವಿ, ಕುರುಕುಂದೆ, ಕುರುವಂಗೆರೆ, ದೇವಗಿರಿ ನೆಲೆವೀಡು, ದೇವದುರ್ಗ, ದೇವಿಯಕೆಯಿ, ನರಸಪುರ, ಬಸವನ ಕೊತ್ತಳ, ಬಸವನ ದಿಡಿ, ಬಸವನ ನಿಟು, ಬೂದಿವಟ್ಟ, ಬೂದಿವಾಳ, ಪಿರಿಯ ಬ್ರಹ್ಮಪುರಿ, ಬಸವನ ಕೊತ್ತಳ, ಬ್ರಹ್ಮಪುರಿ, ಮದನಸಿರಿವಾರ, ಮಲ್ಲೆದೇವರದುರ್ಗ, ಮುಂಡಿರಿಗಿ, ರಾಮಸೇತು, ರಾಮಸಮುದ್ರ, ಲಿಂಗದ ಕಲ್ಲು, ವರ್ಧಮಾನಪುರ, ವಿನಾಯಕನ ನಿಟು, ಸಿರಿಯೂರು, ಸಿರಿವಾರ, ಸುರಪುರ, ಸುಲತಾನಪುರ, ಸೋಮನಹಳ್ಳಿ, ಹರವೆ.

**ದೇಹದ ಅಂಗಾಂಗಗಳಿಗೆ ಸಂಬಂಧಿಸಿದವು**

ಸಿರಗುಪ್ಪೆ, ಕರಹಡನೆಲೆವೀಡು, ಕೋಡುಂಗಲ್ಲು, ತಲೆಖಾನ, ತಳಹನೂರು, ನರಸಪುರ, ನೆರೆಯಂಗಲ್ಲು.

**ನೀರಿಗೆ ಸಂಬಂಧಿಸಿದವು**

ಅಯಾವೊಳೆ, ಆಯ್ಯಾವೊಳೆ, ಅರಸಿಯ ಕೆರೆ, ಆಟುಲಪುರುವತನ ಕೆರೆ, ಏತಗಿರಿ, ಕಡಲೂರು, ಕಲುಕೆರೆ, ಕೆರೆಯೂರು, ಕೊಳನೂರು, ಕೋಡಿಹಳ್ಳಿ, ಚಂದನಕೆರೆ, ಚಿಂಚಿನಬಾವಿ, ಜಡೆಹಳ್ಳ, ಜಲವಾಡಿ, ಜೀಯರಕೆರೆ, ತಾವರೆಗೆರೆ, ತಿದಗಿಬಾವಿ, ಪೊಲದಕೆರೆ, ಬಾರಿಯಹಳ್ಳ, ಬೆಳುಡೋಣಿ, ಬೆಳ್ದೋಣಿಯಕಲ್ಲು, ರಾಮಸಮುದ್ರ, ಸಂಕನಕೆರೆ, ಸೋಮನಹಳ್ಳಿ, ಹಳ್ಳಸಿಂತೆ, ಹಾಲಬಾವಿ, ಹಾಲಾರಿಯಹಳ್ಳ, ಹಿರಿಯಕೆರೆ, ಹಿರೇಯಹಳ್ಳ.

**ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದವು**

ಆನೆಗುಂಡಿ, ಆನೆದೊಂದಿ, ಆನೆವೇರಿ, ಆನೆವರಿ, ಆವಿನಮಡು, ಆವುಜ, ಅಹಿಛ್ಛತ್ರಪುರ, ಕರಡಿಕಲ್ಲು, ಕರಡಿ ಕಲ್ಮೂನೂರು, ಕರಿಯಕೆರೆ, ಕರಿಯಜನ್ನಯಭಟ್ಟ, ಕರಿಯೂರು, ಕರುವಡ, ಕರುಸೆಗಟ್ಟು, ಕರುಯಕಾಟಿಂಗಲ್ಲು, ಕಾಟಿಂಗಲ್ಲು, ಕಾಟಿಂಬಳ್ಳ, ಕಾಲಹಸ್ತಿ, ಕೋಳಿಂಬಾಳ, ಕೊಟ್ಟುಕುಣುಹೆ, ಗೋಕರ್ಣ, ಗೋನೂರು, ಗೋಪುರಗ್ರಾಮ, ಗೋರಿಕಲ್ಲುಪನ್ನೆರಡು, ನವಿಲಿ, ನಾಗರಕೆರೆ, ಬಸವನ ಕೊತ್ತಳ, ಬಸವನ ದಿಡಿ, ಬಸವನ ನಿಟು, ಬಿಮಾಳಕುರಿಕೆ, ಪುಲಿಕಲ್ಲು, ಪುಲಿಪೊದರು, ಮೊಟಮರಿ, ಮೊಸಳಿಕಲ್ಲು ಯೆಂಮೆಗನೂರು, ಸಿಂಗಾಪುರ, ಹಾವಿನಹಾಳು.

**ಬಣ್ಣಗಳಿಗೆ ಸಂಬಂಧಿಸಿದವು**

ಕರಿಯಕೆರೆ, ಕರಿಯಜನ್ನಯಭಟ್ಟ, ಕರಿಯೂರು, ಕಪಿಳರಸ, ಕಿಸುಕಾಡು, ಬಿಳಿಲವಟ್ಟ.

**ಬೆಟ್ಟ ಗುಡ್ಡಗಳಿಗೆ ಸಂಬಂಧಿಸಿದವು**

ಅಯ್ಯಣಗಿರಿವುರ, ಏತಗಿರಿ, ಕನಕಗಿರಿ, ಕಲುಮಲೆ, ಕಲ್ಮಲೆ, ದೇವಗಿರಿ ನೆಲೆವೀಡು, ರತ್ನಮೇಕಲಗಿರಿ.

**ಭೂಮಿಗೆ ಸಂಬಂಧಿಸಿದವು**

ಆಪ್ಪಪಾಳು, ಉದಂಡಮೇದಿನಿಪುರ, ಕಡಗೋಡು, ಕಿರ್ದಿಹೊಲ, ಕುದಿಯಪರವಿ, ಚಿಕಲಪರವಿ, ಡೊಂಕಿಹೊಲ, ಪೊನ್ನಪಾಳು, ಪೊಲದಕೆರೆ, ಪೊಲಗರೆ, ಬಿಮಾಳಕುರಿಕೆ, ಮಾಳಲದಿಂನೆ, ಸೀಳುಕಲ್ಲು.

**ಲೋಹಗಳಿಗೆ ಸಂಬಂಧಿಸಿದವು**

ಕನಕಗಿರಿ, ಕಪಿಳರಸ, ರತ್ನಮೇಕಲಗಿರಿ, ಸೋನಾಪುರ, ಹೊನ್ನಕಣಿ.

**ವ್ಯಾಪಾರಕ್ಕೆ ಸಂಬಂಧಿಸಿದವು**

ತಂಬಿವಟ್ಟ.

**ಸಮುದಾಯಗಳಿಗೆ ಸಂಬಂಧಿಸಿದವು**

ಅಮರಗೊಂಡ, ಅಸಗಗೆರೆ, ಕಮ್ಮರಳಿ, ಕೊರಮಣ್ಣಕೆಯಿ, ಗೊಲ್ಲಗೆರೆ, ಗೌಡಗೆರೆ, ಚಳುಕಿಯರ ಪೊಲೆಗೆರೆ, ಚಿಪ್ಪಿಗವುಳ್ಳ, ಹೊಲಗೇರಿ.

### ಸೌಂದರ್ಯಕ್ಕೆ ಸಂಬಂಧಿಸಿದವು

ಕಪ್ಪಕಲ್ಲ, ಕಾಂತನೂರು, ಪಿರಿಯ ಬೆಳ್ಳಹಾರ, ಚಂದನಕೆರೆ, ಬೇತಾಳಿ, ಮದನಸಿರಿವಾರ, ಲೋಳಸರಹಳ್ಳಿ, ಸಿರಿಯೂರು, ಸಿರಿವಾರ.

### ಕೊನೆಯ ಮಾತು

ಈ ಮೊದಲು ಉಲ್ಲೇಖಿಸಿದ ಅಂಶಗಳನ್ನು ಗಮನಿಸಿದಾಗ ಇವುಗಳು ಭಾರತೀಯ ಸಮಾಜಗಳ ಮುಖ್ಯ ಲಕ್ಷಣವಾದ 'ವಿವಿಧತೆಯಲ್ಲಿ ಏಕತೆ' ಎಂಬ ವಾಸ್ತವಾಂಶವನ್ನು ಬಹಳ ಗಟ್ಟಿಯಾಗಿ ಪ್ರತಿನಿಧಿಸುತ್ತವೆ. ಹಲವು ಬಗೆಯ ಗಿಡಗಳನ್ನು, ಪ್ರಾಣಿಪಕ್ಷಿಗಳನ್ನು, ಹಳ್ಳ-ಕೊಳ್ಳಗಳನ್ನು, ದೇವಾನುದೇವತೆಗಳನ್ನು, ಸಮುದಾಯಗಳನ್ನು, ಅನೇಕ ಸಾಂಸ್ಕೃತಿಕ ಮೌಲ್ಯಗಳನ್ನು ಈ ಎಡೆನಾಮಗಳು ತೋರಿಸಿಕೊಡುತ್ತವೆ. ವಿಶೇಷವೆಂಬಂತೆ ಕರ್ನಾಟಕದಲ್ಲಿ ಕೋಲಾರ ಜಿಲ್ಲೆಯನ್ನೊರತುಪಡಿಸಿದರೆ ರಾಯಚೂರು ಜಿಲ್ಲೆಯೊಂದೇ ಚಿನ್ನದ ನಿಕ್ಷೇಪವನ್ನು ಹೊಂದಿರುವ ಪ್ರದೇಶ ಎಂಬುವುದನ್ನು 'ಹೊನ್ನಕಣಿ' ಎಂಬ ಎಡೆಯು ಸಾಬೀತುಪಡಿಸುತ್ತದೆ. ಆದರೆ ಜಾಗತೀಕರಣ ಮತ್ತು ಜಾಗತೀಕರಣೋತ್ತರ ಸಂಗತಿಗಳು ಎಡೆನಾಮಗಳ ಮೂಲ ಸ್ವರೂಪವನ್ನು ಬದಲಾಯಿಸಿವೆ ಮತ್ತು ಬದಲಾಯಿಸುತ್ತಲಿವೆ. ಇದಕ್ಕೆ ರಾಯಚೂರು ಜಿಲ್ಲೆಯೂ ಹೊರತಾಗಿಲ್ಲ. ಎಡೆನಾಮಗಳನ್ನು ಮತ್ತೆ ಮತ್ತೆ ದಾಖಲೆಗಳಲ್ಲಿ ದಾಖಲಿಸುವ, ಸಮಾಲೋಚನೆ ನಡೆಸುವ, ಬಳಕೆಯಲ್ಲಿ ತರುವ, ತಾತ್ವಿಕ ಮಥನಕ್ಕೆ ಎಳೆಯುವ ಅನಿವಾರ್ಯತೆಯನ್ನು ಸೃಜಿಸಬೇಕಾಗಿದೆ. ಇದು ಸರ್ಕಾರ ಮತ್ತು ಸರ್ಕಾರೇತರ ಸಂಘ- ಸಂಸ್ಥೆಗಳಿದಿಡಿದು ಸಮಾಜಗಳ ಸರ್ವ ಸದಸ್ಯರ ಕೆಲಸವಾಗಬೇಕು.

### ಪರಾಮರ್ಶನ ಸಾಹಿತ್ಯ

[1] ದೇವರಕೊಂಡಾರೆಡ್ಡಿ (ಸಂ), 2003, 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : 7 ರಾಯಚೂರು ಜಿಲ್ಲೆ' , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

[2] ಜೋಶಿ ಶಂ ಬಾ, 2011, 'ಎಡೆಗಳು ಹೇಳುವ ಕಂನಾಡ ಕಥೆ' , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

[3] ದೇವೇಂದ್ರಪ್ಪ ಜಾಜಿ, 2018, 'ಸ್ಥಳನಾಮಗಳು ತೌಲನಿಕ ಅಧ್ಯಯನ' , ಎಸ್.ಎಲ್.ಎನ್ ಪಬ್ಲಿಕೇಷನ್ ಬೆಂಗಳೂರು.

[4] ಶ್ರೀನಿವಾಸ ರಿತ್ತಿ (ಸಂ), 1985, 'ಕರ್ನಾಟಕ ಗ್ರಾಮಸೂಚಿ' , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

[5] ವಾಸುದೇವನ್ ಸಿ ಎಸ್, 1012, 'ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ' , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

[6] ನಾರಾಯಣ ಕೆ ವಿ (ಸಂ), 2019, 'ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ 1 ಭಾಷೆ' , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

[7] ರಾಮಚಂದ್ರೇಗೌಡ ಹಿ ಶಿ(ಪ್ರ ಸಂ), 2007, 'ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ (ಪರಿಷ್ಕೃತ ಸಂಪುಟ 2', ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

[8] ನೇಗಿನಹಾಳ ಎಂ ಬಿ, 1999, 'ನೇಗಿನಹಾಳ ಪ್ರಬಂಧಗಳು (ಸಂಶೋಧನ ಲೇಖನಗಳ ಸಂಗ್ರಹ)', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

[9] ಕನ್ನಡ ರತ್ನಕೋಶ(ಪರಿಷ್ಕೃತ), 2013, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

[10] ದೇಶಪಾಂಡೆ ಎಸ್ ಎಲ್, 2008, 'ಕರ್ನಾಟಕದ ಸ್ಥಳನಾಮಗಳು ಒಂದು ಅಧ್ಯಯನ' , ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ.

[11] ವೆಂಕಟಸುಬ್ಬಯ್ಯ ಜಿ, 1975, 'ಸಂಕ್ಷಿಪ್ತ ಕನ್ನಡ ನಿಘಂಟು (ಕನ್ನಡ-ಕನ್ನಡ)', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

[12] ವಿಜಯ ಪೂಣಚ್ಚ ತಂಬಂಡ (ಸಂ), 2017, 'ಚರಿತ್ರೆ ಅಧ್ಯಯನ ಸಂಪುಟ-10 ಸಂಚಿಕೆ-1', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.